# ತಾಪ್ಸೀ 'ಥಪ್ಪಡ್'



ಬಾಲಿವುಡ್‌ನ ಹಾಡು ಕುಣಿತದ ಹೀರೋಯಿನ್‌ಗಳ ಮುಂದೆ ತಾಪ್ಸೀ ಪನ್ನು ಸದಾ ಒಂದು ಹೆಜ್ಜೆ ಮುಂದೆಯೇ ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ದೀಪಿಕಾಳಂತಹ ಗ್ಲ್ಯಾಮರ್ ನಟಿಯೇ 'ಛಪಾಕ್'ನಲ್ಲಿ ಅಭಿನಯಕ್ಕೆ ಸವಾಲೆಸೆಯುವ ಪಾತ್ರ ಮಾಡಿ ಸೈ ಎನ್ನಿಸಿಕೊಂಡದ್ದು ಈಗ ಹಳೆಯ ಸುದ್ದಿ. ತಾಪ್ಸೀ ಪನ್ನು ದೀಪಿಕಾಳನ್ನೂ ಹಿಮ್ಮೆಟ್ಟಿಸುವಂತಹ ಅಭಿನಯ ನೀಡಿರುವ ಸಿನಿಮಾ 'ಥಪ್ಪಡ್.' ಇಡೀ ಚಿತ್ರವನ್ನು ತಾಪ್ಸೀ ಇಡಿಯಾಗಿ ಆವರಿಸಿಕೊಂಡಿರುವುದು ಆಕೆಯ ಅಭಿಮಾನಿಗಳಿಗಂತೂ ಹೆಮ್ಮೆಯ ವಿಚಾರ. 'ಪಿಂಕ್', 'ಬದ್ಲಾ' ಮುಂತಾದ ಚಿತ್ರಗಳಲ್ಲಿ ಪ್ರೇಕ್ಷಕರು ಬೆರಗು ಹುಟ್ಟುವಂತೆ ನಟಿಸಿದ್ದ ತಾಪ್ಸೀ, ಈಗ 'ಥಪ್ಪಡ್'ನಲ್ಲಿ ಇನ್ನಷ್ಟು ಎತ್ತರಕ್ಕೆ ಏರಿದ್ದಾಳೆ. ಈ ಪಾತ್ರ ಆಕೆಯ ಜೀವನದ ಅತ್ಯುತ್ತಮ ಪಾತ್ರ ಎನ್ನುವ ಸುದ್ದಿ ಈಗಾಗಲೇ ಹಬ್ಬಿದೆ.

ನಿರ್ದೇಶಕ ಅನುಭವ ಸಿನ್ಹಾ ಕಳೆದೆರಡು ವರ್ಷ 'ಮುಲ್ಕ್' ಮತ್ತು 'ಆರ್ಟಿಕಲ್ 15' ಎನ್ನುವ ಸಿನಿಮಾಗಳನ್ನು ನೀಡಿ ಸೂಪರ್‌ಹಿಟ್ ನಿರ್ದೇಶಕ ಎನ್ನಿಸಿಕೊಂಡಿದ್ದರು. ಎರಡೂ ಚಿತ್ರಗಳು ವಿಮರ್ಶಕರ ಅಪಾರ ಮೆಚ್ಚುಗೆ ಮಾತ್ರವಲ್ಲದೆ, ಬಾಕ್ಸ್‌ಆಫೀಸ್‌ನಲ್ಲೂ ಹಣ ಬಾಚಿದ್ದವು. ಆದರೆ 'ಥಪ್ಪಡ್'ನ ಮೊದಲ ವಾರದ ಗಳಿಕೆ ಅಷ್ಟೇನೂ ಚೆನ್ನಾಗಿಲ್ಲ. 'ಗಂಡನೊಬ್ಬ ಹೆಂಡತಿಯ ಕಪಾಳಕ್ಕೆ ಹೊಡೆದರೆ ಅದನ್ನೇ ಡೈವೋರ್ಸ್‌ಗೆ ಕಾರಣವಾಗಿ ಬಳಸಬಹುದೇ..' ಎನ್ನುವ ಪ್ರಶ್ನೆಯೇ ಕಥೆಯ ಜೀವಾಳ. ಬಹುತೇಕ ಸಾಂಪ್ರದಾಯಕ ಮನಸ್ಸುಗಳಿಗೆ ಈ ಕಥೆಯೇ ಹಿಡಿಸಿದಂತಿಲ್ಲ. ಆದರೆ ಸಿನಿಮಾ ಮೆಚ್ಚದವರೂ 'ಅಬ್ಬಾ.. ತಾಪ್ಸೀ ಅಭಿನಯವೇ!' ಎಂದು ಥಿಯೇಟರಿನಿಂದ ಹೊರಬಂದು ಉದ್ಗರಿಸುತ್ತಿರುವುದು ಮಾತ್ರ ನಿಜ.

ಈ ವರ್ಷದ ಚಲನಚಿತ್ರ ಪ್ರಶಸ್ತಿಗಳಲ್ಲಿ ಅತ್ಯುತ್ತಮ ನಟಿ ಸ್ಥಾನಕ್ಕೆ ದೀಪಿಕಾ ಮತ್ತು ತಾಪ್ಸೀ ಮಧ್ಯೆ ಹಣಾಹಣಿ ನಡೆಯುವುದು ಖಚಿತ ಎನ್ನುವ ಸುದ್ದಿ ಈಗಾಗಲೇ ಹಬ್ಬಿದೆ. ■



# ನಿರುದ್ಯೋಗಿ ಶಾರೂಕ್

ಶಾರೂಕ್ ಖಾನ್ ನಟಿಸುತ್ತಿರುವ ಹೊಸ ಸಿನಿಮಾ ಯಾವುದು ಎನ್ನುವುದೀಗ ಬಾಲಿವುಡ್ ಮುಂದೆ ಮಿಲಿಯನ್ ಡಾಲರ್ ಪ್ರಶ್ನೆಯಂತೆ ಎದ್ದು ನಿಂತಿದೆ. ಕಳೆದ ವರ್ಷದ ಕೊನೆಗೆ ಹೊಸ ಸಿನಿಮಾದ ಘೋಷಣೆ ಆಗಬಹುದು ಎನ್ನುವ ಗಾಳಿಸುದ್ದಿ ಹಬ್ಬಿತ್ತು. ಆಮೇಲೆ ಹೊಸ ವರ್ಷದ ಆರಂಭದಲ್ಲಿ ಅಭಿಮಾನಿಗಳು ಶಾರೂಕ್‌ನ ಘೋಷಣೆಯನ್ನು ಕಾದು ಕುಳಿತರು. ಅದಕ್ಕೆ ತಕ್ಕಂತೆ ತಮಿಳಿನ ಜನಪ್ರಿಯ ನಿರ್ದೇಶಕ ಅಟ್ಲೀ ಮುಂಬೈಗೆ ಬಂದು ಶಾರೂಕ್ ಜೊತೆಗೆ ಮಾತನಾಡಿ ಹೋದದ್ದೂ ಆಯಿತು. ಶಾರೂಕ್ ಮುಂದಿನ ಸಿನಿಮಾವನ್ನು ಕರಣ್ ಜೋಹರ್ ನಿರ್ದೇಶಿಸಲಿದ್ದಾನೆ ಎನ್ನುವ ಸುದ್ದಿಯೂ ತಣ್ಣಗಾಯಿತು. ಹೊಸ ವರ್ಷದ ಎರಡು ತಿಂಗಳು ಸರಿದರೂ ಶಾರೂಕ್ ಹೊಸ ಚಿತ್ರದ ಸುದ್ದಿಯಿಲ್ಲ. 'ಝೀರೊ' ಎನ್ನುವ ಸಿನಿಮಾದಲ್ಲಿ ಕುಳ್ಳನ ಪಾತ್ರ ಮಾಡಿದ್ದೇ ಶಾರೂಕ್‌ಗೆ ಶಾಪವಾಯಿತೆ? ಶಾರೂಕ್ ಬಾಲಿವುಡ್‌ನ ಬಾದ್‌ಷಾ ಪಟ್ಟದಿಂದ ಇಳಿದಾಗಿದೆಯೆ? ಶಾರೂಕ್‌ನನ್ನು ಪ್ರೇಕ್ಷಕರು ಮರೆತೇಬಿಟ್ಟರೆ? ಹೀಗೆ ಪ್ರಶ್ನೆಗಳು ಒಂದರ ಹಿಂದೆ ಒಂದರಂತೆ ಏಳುತ್ತಿರುವಾಗಲೇ ಕಳೆದ ವಾರ ಶಾರೂಕ್, ಪತ್ನಿ ಗೌರಿಯ ಡಿಸೈನರ್ ಮಳಿಗೆಗೆ ಭೇಟಿ ಕೊಟ್ಟದ್ದು ದೊಡ್ಡ ಸುದ್ದಿಯಾಗಿದೆ.

ಗೌರಿ ಬಾಲಿವುಡ್‌ನ ಜನಪ್ರಿಯ ಡಿಸೈನರ್. ಆಕೆಯ ಮಳಿಗೆಗೆ ಭೇಟಿ ನೀಡಿದ ಶಾರೂಕ್, ಅಲ್ಲಿ ಮುತ್ತಿಗೆ ಹಾಕಿದ ಅಭಿಮಾನಿಗಳ ಜೊತೆಗೆ ಫೋಟೊ ಪೋಸ್ ಕೊಟ್ಟಿದ್ದಾನೆ. ಮಾತಿನ ಮಧ್ಯೆ ಒಂದು ಹಂತದಲ್ಲಿ ಗೌರಿ ಗಂಡನನ್ನು ಕಿಚಾಯಿಸಿದ್ದಾಳೆ. 'ಸದ್ಯಕ್ಕೆ ಶಾರೂಕ್ ಕೈಯಲ್ಲಿ ಸಿನಿಮಾಗಳು ಇಲ್ಲವಾದ್ದರಿಂದ ನನ್ನ ಮಳಿಗೆಗೇ ಸೇರಿಕೊಳ್ಳಬಹುದು. ಆತ ನಿಜಕ್ಕೂ ಉತ್ತಮ ಡಿಸೈನರ್' ಎಂದಿದ್ದಾಳೆ ಗೌರಿ. ಪತ್ನಿಯ ಜೋಕ್‌ಗೆ ಶಾರೂಕ್ ಜೋರಾಗಿ ನಕ್ಕನಂತೆ!

ಹಾಗೆ ನೋಡಿದರೆ, ತನ್ನ ಮೇಲೆಯೇ ಜೋಕ್ ಮಾಡಿಕೊಳ್ಳುವುದಕ್ಕೆ ಶಾರೂಕ್ ಎಂದೂ ಹಿಂಜರಿದವನಲ್ಲ. ಅಮೆಜಾನ್‌ನ ಮುಖ್ಯಸ್ಥ ಜೆಫ್ ಬಿಜೋಸ್ ಭಾರತಕ್ಕೆ ಬಂದಾಗ ನಡೆದ ಸಮಾರಂಭದಲ್ಲೂ ಹೀಗೆಯೇ ಆಗಿತ್ತು. 'ಸ್ಟೇಜ್ ಹಿಂದೆ ಶಾರೂಕ್ ಜೊತೆಗೆ ಮಾತನಾಡಿದೆ. ನಿಜಕ್ಕೂ ಆತ ಎಷ್ಟೊಂದು ವಿನಯವಂತ ಎಂದು ಆಶ್ಚರ್ಯವಾಗುತ್ತಿದೆ' ಎಂದು ಜೆಫ್ ಬಿಜೋಸ್ ವೇದಿಕೆಯ ಮೇಲೆ ಹೊಗಳಿದಾಗ, ಪಕ್ಕದಲ್ಲಿದ್ದ ಶಾರೂಕ್ 'ಹೌದು, ಇತ್ತೀಚೆಗೆ ನನ್ನ ಸಿನಿಮಾಗಳೇ ಇಲ್ಲವಲ್ಲ..' ಎಂದು ತನ್ನನ್ನೇ ಜೋಕ್ ಮಾಡಿಕೊಂಡು ನೆರೆದಿದ್ದ ಜನರನ್ನು ನಗಿಸಿದ್ದ.

ಈ ವರ್ಷ ಶಾರೂಕ್ ನಟಿಸಲಿರುವ ಏಳು ಸಿನಿಮಾಗಳಿವೆ ಎಂದು ಅಭಿಮಾನಿಗಳು ಪಟ್ಟಿ ಕೊಡುತ್ತಾರೆ. ಅದರಲ್ಲಿ ಕರಣ್ ಜೋಹರ್, ಗೋವರಿಕರ್ ಮುಂತಾದ ಖ್ಯಾತನಾಮ ನಿರ್ದೇಶಕರ ಹೆಸರೂ ಇದೆ. 'ಆಪರೇಷನ್ ಕುಕ್ರಿ', 'ಡಾನ್ 3', 'ಧೂಮ್ 4'– ಹೀಗೆ ಸಿನಿಮಾ ಹೆಸರುಗಳ ಪಟ್ಟಿಯೂ ಇದೆ. ಶಾರೂಕ್ ಘೋಷಣೆಯನ್ನೇ ಬಾಲಿವುಡ್ ಕಾಯುತ್ತಿದೆ.

■ ಬಿಂದು